**ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ ಬೆಂಗಳೂರು-18.**

**ಸಂಖ್ಯೆ: ಮಾ.ಸಂ.ಅ/ಹೈ.ಕ.ನೇ./ 106 /2020-21** **ದಿನಾಂಕ: 01/06/2020**

**ನೇಮಕಾತಿ ಪ್ರಕಟಣೆ**

**ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ ಬೆಂಗಳೂರು, ಇದರಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಹಾಗು ರಾಜ್ಯ ವೃಂದದಲ್ಲಿ ಖಾಲಿ ಇರುವ ಕಾನೂನು ಅಧಿಕಾರಿಗಳು, ಲೆಕ್ಕಾಧಿಕಾರಿಗಳು ಮತ್ತು ಹಿರಿಯ ಸಹಾಯಕರು ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಹೈದರಾಬಾದ್-ಕರ್ನಾಟಕ ವ್ಯಾಪ್ತಿಗೆ ಒಳಪಡುವ ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಖುದ್ದಾಗಿ/ಅಂಚೆ/ಕೊರಿಯರ್ ಇತ್ಯಾದಿ ಮೂಲಕ ಕಳುಹಿಸಲು ಅವಕಾಶವಿರುವುದಿಲ್ಲ.**

## I: ಹುದ್ದೆಗಳ ವಿವರ:

**ಹೈದರಾಬಾದ್ ಕರ್ನಾಟಕ ವ್ಯಾಪ್ತಿಗೆ ಒಳಪಡುವ ಅಭ್ಯರ್ಥಿಗಳಿಗೆ ಮೀಸಲಾತಿ**

**1)ಹುದ್ದೆಯ ಹೆಸರು: ಕಾನೂನು ಅಧಿಕಾರಿ, ಒಟ್ಟು ಹುದ್ದೆಗಳ ಸಂಖ್ಯೆ- 02 ವೇತನ ಶ್ರೇಣಿ: ರೂ: 24200 –52950/-**

| ವರ್ಗಗಳ ವಿವರ | ಮೀಸಲಾತಿ ವರ್ಗೀಕರಣ | | | | | | | |
|---|---|---|---|---|---|---|---|---|
| | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಅಂಗವಿಕಲರು | ಇತರೆ | ಒಟ್ಟು |
| ಪರಿಶಿಷ್ಟ ಜಾತಿ | - | - | - | - | - | - | 1 | 1 |
| ಪರಿಶಿಷ್ಟ ಪಂಗಡ | - | - | - | - | - | - | 1 | 1 |
| ಒಟ್ಟು | **-** | **-** | **-** | **-** | **-** | **-** | **2** | **2** |

**ಕನಿಷ್ಠ ವಿದ್ಯಾರ್ಹತೆ: ಕ್ರಮ ಸಂಖ್ಯೆ 01 ರ ಹುದ್ದೆಗೆ**

1. ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದ ಕಾನೂನು ಪದವೀಧರರಾಗಿರಬೇಕು. ಕಾನೂನು ಪದವಿಯಲ್ಲಿ ಕನಿಷ್ಠ ಶೇ.50 ಅಂಕಗಳನ್ನು ಪಡೆದಿರಬೇಕು. ವಕೀಲಿ ವೃತ್ತಿಯಲ್ಲಿ 03 ವರ್ಷದ ಅನುಭವ ಹೊಂದಿರಬೇಕು. ಗಣಕಯಂತ್ರದ ನಿರ್ವಹಣೆ ಮತ್ತು ತಂತ್ರಾಂಶಗಳ ಬಳಕೆಯ ಬಗ್ಗೆ ಜ್ಞಾನವನ್ನು ಪಡೆದಿರಬೇಕು.
2. ಕನ್ನಡವನ್ನು ಓದಲು, ಬರೆಯಲು, ಅರ್ಥೈಸಿಕೊಳ್ಳಲು ಶಕ್ತರಾಗಿರುವುದರೊಂದಿಗೆ ಕನ್ನಡವನ್ನು ನಿರಾತಂಕವಾಗಿ ಮಾತನಾಡಲು ಶಕ್ತರಾಗಿರಬೇಕು.

**2)ಹುದ್ದೆಯ ಹೆಸರು: ಲೆಕ್ಕಾಧಿಕಾರಿಗಳು, ಒಟ್ಟು ಹುದ್ದೆಗಳ ಸಂಖ್ಯೆ- 02 ವೇತನ ಶ್ರೇಣಿ: ರೂ: 24200 – 52950/-**

| ವರ್ಗಗಳ ವಿವರ | ಮೀಸಲಾತಿ ವರ್ಗೀಕರಣ | | | | | | | |
|---|---|---|---|---|---|---|---|---|
| | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಅಂಗವಿಕಲರು | ಇತರೆ | ಒಟ್ಟು |
| ಪ್ರವರ್ಗ- 1 | - | - | - | - | - | - | 1 | 1 |
| ಪ್ರವರ್ಗ-2 ಎ | - | - | - | - | - | - | 1 | 1 |
| ಒಟ್ಟು | **-** | **-** | **-** | **-** | **-** | **-** | **2** | **2** |

*ಕನಿಷ್ಠ ವಿದ್ಯಾರ್ಹತೆ: ಕ್ರಮ ಸಂಖ್ಯೆ.2 ರ ಹುದ್ದೆಗೆ:*

*(1) ಅಂಗೀಕೃತ ವಿಶ್ವ ವಿದ್ಯಾನಿಲಯದಿಂದ ವಾಣಿಜ್ಯ ಶಾಸ್ತ್ರ/ಸಹಕಾರ/ಮ್ಯಾನೇಜ್ಮೆಂಟ್(**Management**)ವಿಷಯದಲ್ಲಿ ಪದವೀಧರರಾಗಿರಬೇಕು.*

*(2) ಗಣಕಯಂತ್ರದ ನಿರ್ವಹಣೆ ಮತ್ತು ತಂತ್ರಾಂಶಗಳ ಬಳಕೆಯ ಜ್ಞಾನದೊಂದಿಗೆ " ಟ್ಯಾಲಿ" (**Tally**) ತಂತ್ರಜ್ಞಾನದ ಸರ್ಟಿಫಿಕೇಟ್ ಪ್ರಶಿಕ್ಷಣದಲ್ಲಿ ಉತ್ತೀರ್ಣರಾಗಿರಬೇಕು.*

*(3) ಕನ್ನಡವನ್ನು ಓದಲು, ಬರೆಯಲು, ಅರ್ಥೈಸಿಕೊಳ್ಳಲು ಶಕ್ತರಾಗಿರುವುದರೊಂದಿಗೆ ಕನ್ನಡವನ್ನು ನಿರಾತಂಕವಾಗಿ ಮಾತನಾಡಲು ಶಕ್ತರಾಗಿರಬೇಕು.*

**3) ಹುದ್ದೆಯ ಹೆಸರು: ಹಿರಿಯ ಸಹಾಯಕರು /ಹಿರಿಯ ಸಹಾಯಕ (ಕಂಪ್ಯೂಟರ್) ಒಟ್ಟು ಹುದ್ದೆಗಳ ಸಂಖ್ಯೆ– 03**
**ವೇತನ ಶ್ರೇಣಿ: ರೂ. 16200 – 40450/–**

| *ವರ್ಗಗಳ* | ಮೀಸಲಾತಿ ವರ್ಗೀಕರಣ | | | | | | | |
|---|---|---|---|---|---|---|---|---|
| | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಅಂಗವಿಕಲರು | ಇತರೆ | ಒಟ್ಟು |
| ಸಾಮಾನ್ಯ | - | 1 | - | - | - | - | - | 1 |
| ಪ್ರವರ್ಗ– *1* | - | - | - | - | - | - | 1 | 1 |
| ಪ್ರವರ್ಗ– *2ಎ* | - | - | - | - | - | - | 1 | 1 |
| ಒಟ್ಟು | - | 1 | - | - | - | - | 2 | 3 |

<u>ಕನಿಷ್ಟ ವಿದ್ಯಾರ್ಹತೆ: ಕ್ರಮ ಸಂಖ್ಯೆ.3 ರ ಹುದ್ದೆಗೆ:</u>

(1) ಅಂಗೀಕೃತ ವಿಶ್ವ ವಿದ್ಯಾನಿಲಯದಿಂದ ಪದವಿ ಹೊಂದಿರಬೇಕು ಜೊತೆಗೆ ಅಂಗೀಕೃತ ಸಂಸ್ಥೆಯಿಂದ ಗಣಕಯಂತ್ರದ ನಿರ್ವಹಣೆ ಮತ್ತು ತಂತ್ರಾಂಶಗಳ ಬಳಕೆಯ ಬಗ್ಗೆ ಜ್ಞಾನವನ್ನು ಪಡೆದಿರಬೇಕು.

(2) ಕನ್ನಡವನ್ನು ಓದಲು, ಬರೆಯಲು, ಅರ್ಥೈಸಿಕೊಳ್ಳಲು ಶಕ್ತರಾಗಿರುವುದರೊಂದಿಗೆ ಕನ್ನಡವನ್ನು ನಿರಾತಂಕವಾಗಿ ಮಾತನಾಡಲು ಶಕ್ತರಾಗಿರಬೇಕು.

## <u>ಸೂಚನೆಗಳು:</u>

- ಬ್ಯಾಂಕಿನಲ್ಲಿ ಹಾಲಿ ಇರುವ ಈ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಂಬಂಧ ನೇರ ನೇಮಕಾತಿ ಪ್ರಕ್ರಿಯೆಯ ಪೂರ್ಣ ವಿವರಗಳನ್ನು ಬ್ಯಾಂಕಿನ ಜಾಲ ತಾಣದಿಂದ (website) ಪಡೆದು ತಾಕ್ಷಣಿಕ ಸೇವೆಯ (Online) ಮೂಲಕವೇ ಅರ್ಜಿ ಸಲ್ಲಿಸತಕ್ಕದ್ದು. ಬೇರೆ ಯಾವುದೇ ರೀತಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಅಭ್ಯರ್ಥಿಯು ಭಾರತೀಯ ನಾಗರೀಕನಾಗಿರತಕ್ಕದ್ದು.
- ಕನ್ನಡ ಭಾಷೆಯಲ್ಲಿ ಓದಲು, ಬರೆಯಲು, ತಿಳಿದುಕೊಳ್ಳಲು, ಮಾತನಾಡಲು ಬರಬೇಕು.
- ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು.
- ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಅಂತಹ ಅಭ್ಯರ್ಥಿಗಳು ಒಂದೇ ನೊಂದಣಿ ಸಂಖ್ಯೆಯಡಿಯಲ್ಲಿಯೇ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸಿ, ಪ್ರತ್ಯೇಕವಾಗಿ ಅರ್ಜಿ ಸಲ್ಲಿಸತಕ್ಕದ್ದು.
- ಅಭ್ಯರ್ಥಿಗಳು ಆನ್ ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಲ್ಲಿ ಅಪೂರ್ಣ ಮಾಹಿತಿಗಳನ್ನು ನೀಡಿದಲ್ಲಿ ಅಂತಹ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳದೆ ತಿರಸ್ಕರಿಸಲಾಗುವುದು.
- ಕೇಂದ್ರ/ರಾಜ್ಯ ಸರ್ಕಾರದ ಇಲಾಖೆಗಳಲ್ಲಿ/ಅರೆ ಸರ್ಕಾರಿ ಸಂಘ ಸಂಸ್ಥೆಗಳಲ್ಲಿ/ಇತರೆ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಹಾಲಿ ಉದ್ಯೋಗದಾತರಿಂದ/ನೇಮಕಾತಿ ಪ್ರಾಧಿಕಾರಿಗಳಿಂದ ನಿಗದಿತ ನಮೂನೆಯಲ್ಲಿ ನಿರಾಕ್ಷೇಪಣಾ ಪತ್ರವನ್ನು ಸಹಿ, ಮೊಹರು, ದಿನಾಂಕಗಳೊಂದಿಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದುಕೊಂಡಿರತಕ್ಕದ್ದು. ಮೂಲದಾಖಲಾತಿ ಪರಿಶೀಲನೆಗೆ ಅರ್ಹರಾದಲ್ಲಿ ಸದರಿ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸತಕ್ಕದ್ದು.
- ಪ್ರಮಾಣ ಪತ್ರ ಇತ್ಯಾದಿಗಳ ನಮೂನೆಗಳನ್ನು ನೇಮಕಾತಿ ಪ್ರಕಟಣೆಯ ಕೊನೆಯಲ್ಲಿ ನೀಡಲಾಗಿದೆ.
- ನಿಗಧಿತ ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಅವಧಿಯಲ್ಲಿ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದಿರುವ ನಡತೆ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಸಲ್ಲಿಸತಕ್ಕದ್ದು.
- ಅಭ್ಯರ್ಥಿಗಳು ಲಿಖಿತ ಪರೀಕ್ಷೆ/ಸಂದರ್ಶನಕ್ಕೆ ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗಬೇಕು. ಯಾವುದೇ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ಪುನರ್‌ಭರಣ ಮಾಡಲಾಗುವುದಿಲ್ಲ.

- ಆಯ್ಕೆಯಾದ ಅಭ್ಯರ್ಥಿಗಳ ದೇಹ ಸುಸ್ಥಿತಿಯ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿಯವರಿಂದ ಪಡೆದ ಅರ್ಹತಾ ಪತ್ರ ಹಾಗೂ ಕ್ರಿಮಿನಲ್ ಮೊಕದ್ದಮೆಯಲ್ಲಿ ಭಾಗಿಯಾಗದಿರುವುದರ ಬಗ್ಗೆ ಸಂಬಂಧಪಟ್ಟ ಅರಕ್ಷಕ ಠಾಣೆ ಅಧಿಕಾರಿಗಳಿಂದ ದೃಢೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು.
- ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕಿನ ಸೇವೆಗೆ ಹಾಜರಾಗುವಾಗ ಭದ್ರತಾ ಠೇವಣಿ ರೂ.10,000/- ಗಳನ್ನು ಪಾವತಿಸಬೇಕು ಮತ್ತು ರೂ.50,000/- ಗಳ ಇಂಡೆಮ್ನಿಟಿ ಬಾಂಡ್ ನೀಡಬೇಕಾಗುತ್ತದೆ. ನೇಮಕವಾಗಿ ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷಗಳ ಪರೀಕ್ಷಾರ್ಥ(**Probationery**) ಸೇವೆಯಲ್ಲಿ ಇರಬೇಕು.

## II) ವಯೋಮಿತಿ:

ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: **01-7-2020** ರಂದು ಕನಿಷ್ಟ/ಗರಿಷ್ಟ ವಯೋಮಿತಿ ಈ ಕೆಳಕಂಡಂತೆ ಇರತಕ್ಕದ್ದು.(ವರ್ಷಗಳಲ್ಲಿ)

| ಕ್ರ. ಸಂ | ಮೀಸಲಾತಿ ವರ್ಗೀಕರಣ | ಕನಿಷ್ಟ ವಯೋಮಿತಿ (ಹೊಂದಿರಬೇಕು) | ಗರಿಷ್ಠ ವಯೋಮಿತಿ (ಮೀರಿರಬಾರದು) |
|---|---|---|---|
| 1 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 | 18 | 40 |
| 2 | ಪ್ರವರ್ಗ-2ಎ | 18 | 38 |
| 3 | ಸಾಮಾನ್ಯ ಅರ್ಹತೆ | 18 | 35 |
| 4 | ಮಾಜಿ ಸೈನಿಕರಿಗೆ ಅವರು ಸಲ್ಲಿಸಿದ ಅವಧಿಗೆ ಹಾಗೂ ಅಂಗವಿಕಲರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ. | | |

## III) ಅರ್ಜಿ ಶುಲ್ಕ:

| | | |
|---|---|---|
| 1 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಅಭ್ಯರ್ಥಿಗಳು ಪಾವತಿಸಬೇಕಾದ ಅರ್ಜಿ ಶುಲ್ಕ | ರೂ.500/-+ ಅಂಚೆ ಕಛೇರಿ ಶುಲ್ಕ ರೂ.30/- |
| 2 | ಇತರೆ ವರ್ಗದ ಅಭ್ಯರ್ಥಿಗಳು ಪಾವತಿಸಬೇಕಾದ ಅರ್ಜಿ ಶುಲ್ಕ | ರೂ.1000/- + ಅಂಚೆ ಕಛೇರಿ ಶುಲ್ಕ ರೂ.30/- |

**ಸೂಚನೆಗಳು:**

- ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡಲು **on line** ನಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೇ ಪಾಲಿಸುವುದು.
- ತಪ್ಪು ಮಾಹಿತಿಗಳನ್ನು ನೀಡಿರುವುದು ಕಂಡುಬಂದಲ್ಲಿ ಅಂತಹವರ ಅರ್ಜಿಯನ್ನು ತಿರಸ್ಕರಿಸಲಾಗುವುದು
- ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ ಕರ್ನಾಟಕ ರಾಜ್ಯದಲ್ಲಿನ ಯಾವುದೇ ವಿದ್ಯುನ್ಮಾನ ಪಾವತಿ(**E-payment**) ಸೌಕರ್ಯವಿರುವ ಅಂಚೆ ಕಛೇರಿಗೆ ತೆರಳಿ ನಿಗಧಿತ ಶುಲ್ಕ ರೂ.30/- ಗಳನ್ನು ಪಾವತಿ ಮಾಡತಕ್ಕದ್ದು. ಬೇರಾವುದೇ ರೀತಿಯಲ್ಲಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ.
- ಶುಲ್ಕವನ್ನು ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕವಾದ **03-7-2020** ರ ನಂತರ ಶುಲ್ಕವನ್ನು ಸಂದಾಯ ಮಾಡಿದವರ ಅರ್ಜಿಯನ್ನು ತಿರಸ್ಕರಿಸಲಾಗುವುದು. ಡಿ.ಡಿ/ಚೆಕ್/ಪೋಸ್ಟಲ್ ಆರ್ಡರ್/ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

- ಒಮ್ಮೆ ಪಾವತಿಸಿದ ಶುಲ್ಕವನ್ನು ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೆ ಯಾವುದೇ ಅಭ್ಯರ್ಥಿಗಳ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
- ಅರ್ಜಿಗಳನ್ನು ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟಲ್ಲಿ, ಮುಂದಿನ ಕೆಲಸದ ದಿನವು ಅರ್ಜಿಗಳನ್ನು ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕವಾಗುವುದು.

**(IV) ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಗಡುವು ದಿನಾಂಕದ ವಿವರ:-**

| ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ:02-06-2020 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:01-07-2020 | ಶುಲ್ಕ ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 03-07-2020 |
|---|---|---|

ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಭರ್ತಿ ಮಾಡತಕ್ಕದ್ದು. ಅರ್ಜಿಶುಲ್ಕವನ್ನು ಅಂಚೆ ಕಛೇರಿಯ ಕೆಲಸದ ವೇಳೆಯೊಳಗೆ ಕರ್ನಾಟಕ ರಾಜ್ಯದ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ **(E-Payment Post Office Only)** ಮಾತ್ರ ಸಂದಾಯ ಮಾಡಬಹುದಾಗಿರುತ್ತದೆ.

**V) ಆಯ್ಕೆ ವಿಧಾನ:**

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ಮತ್ತು ಕಾಲಕಾಲಕ್ಕೆ ಸರ್ಕಾರವು ನೇರ ನೇಮಕಾತಿ ಬಗ್ಗೆ ಹೊರಡಿಸುವ ಆದೇಶಗಳು, ಸೂಚನೆಗಳು ಮತ್ತು ನಿರ್ದೇಶನಗಳಿಗನುಸಾರವಾಗಿ ಹುದ್ದೆಗಳ ನೇಮಕಾತಿಗೆ ಲಿಖಿತ ಪರೀಕ್ಷೆಯನ್ನು ಏರ್ಪಡಿಸಲಾಗುವುದು.

ಮೇಲ್ಕಂಡ ಹುದ್ದೆಗಳಿಗೆ ಕನ್ನಡ ಭಾಷೆಗೆ 50 ಅಂಕಗಳು, ಆಂಗ್ಲ ಭಾಷೆಗೆ 25 ಅಂಕಗಳು, ಸಾಮಾನ್ಯ ಜ್ಞಾನಕ್ಕೆ 25 ಅಂಕಗಳು, ಸಹಕಾರ ವಿಷಯಕ್ಕೆ 50 ಅಂಕಗಳು, ಭಾರತ ಸಂವಿಧಾನ ವಿಷಯಕ್ಕೆ 25 ಅಂಕಗಳು, ಬ್ಯಾಂಕಿನ ಧ್ಯೇಯೋದ್ದೇಶಗಳು ಮತ್ತು ಚಟುವಟಿಕೆಗಳು ವಿಷಯಕ್ಕೆ -25.ಅಂಕಗಳು, ಎಲ್ಲಾ ಸೇರಿ ಒಟ್ಟು 200 ಅಂಕಗಳನ್ನು ನಿಗಧಿಪಡಿಸಿ ಬಾಹ್ಯ ಮೂಲಗಳಿಂದ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು. ಹುದ್ದೆಗಳಿಗೆ ನಿಯಮಾನುಸಾರ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಕರೆಯಲಾಗುವುದು. ಪರೀಕ್ಷಾ ಅರ್ಹತಾ ಪತ್ರವನ್ನು ಜಾಲತಾಣದಲ್ಲಿ ಅಳವಡಿಸಲಾಗುವುದು. ಜಾಲತಾಣದಿಂದ ಪರೀಕ್ಷಾ ಅರ್ಹತಾ ಪತ್ರವನ್ನು ಡೌನ್ ಲೋಡ್ ಮಾಡಿಕೊಂಡು ಪರೀಕ್ಷೆಗೆ ಬರುವಾಗ ಹಾಜರುಪಡಿಸತಕ್ಕದ್ದು.

ಲಿಖಿತ ಪರೀಕ್ಷೆಯಲ್ಲಿ ಗಳಿಸಿರುವ ಸರಾಸರಿ ಅಂಕಗಳನ್ನು ಪ್ರತಿಶತ ಶೇ.85ಕ್ಕೆ ಇಳಿಸಲಾಗುವುದು.
ಉದಾ:ಅಭ್ಯರ್ಥಿಯೊಬ್ಬರು
ಲಿಖಿತ ಪರೀಕ್ಷೆಯಲ್ಲಿ 200 ಅಂಕಗಳಿಗೆ ಒಟ್ಟು 150 ಅಂಕಗಳನ್ನು ಗಳಿಸಿದ್ದಾರೆ ಎಂದಾದಲ್ಲಿ ಅದರ ಪ್ರತಿಶತ ಶೇ.85% ರಷ್ಟು ಪ್ರಮಾಣವು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗುವುದು.

$\frac{150 \times 100}{200} = 75$ ಇದರ ಶೇ.85 = $\frac{75 \times 85}{100} = 63.75$ ಆಗುತ್ತದೆ.

ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಅನುಸಾರವಾಗಿ 1:5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಮೌಖಿಕ ಪರೀಕ್ಷೆಗೆ ಕರೆಯಲಾಗುವುದು. ಮೌಖಿಕ ಪರೀಕ್ಷೆಗೆ-15 ಅಂಕಗಳನ್ನು ನಿಗಧಿಪಡಿಸಲಾಗಿರುತ್ತದೆ.

ಮೇಲ್ಕಂಡಂತೆ ಅಭ್ಯರ್ಥಿಯು ಮೌಖಿಕ ಪರೀಕ್ಷೆಗೆ ಆಯ್ಕೆಯಾದಲ್ಲಿ 15 ಅಂಕಗಳಿಗೆ ನಡೆಸಲಾಗುವ ಸಂದರ್ಶನದಲ್ಲಿ ಗಳಿಸುವ ಅಂಕಗಳನ್ನು 63.75 ಅಂಕಗಳಿಗೆ ಸೇರಿಸಲಾಗುತ್ತದೆ. ಅಭ್ಯರ್ಥಿಗಳು ಲಿಖಿತ ಪರೀಕ್ಷೆ ಮತ್ತು ಸಂದರ್ಶನಗಳಲ್ಲಿ ಗಳಿಸುವ ಒಟ್ಟು ಅಂಕಗಳನ್ನು ಆಧರಿಸಿ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುವುದು.

## VI) ಮೀಸಲಾತಿಗಳು:

ಜಾತಿ/ವರ್ಗ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನಿಗದಿಪಡಿಸಿರುವ ನಮೂನೆಗಳಲ್ಲಿ ಹಾಗೂ ಚಾಲ್ತಿಯಲ್ಲಿರುವ ಅಗತ್ಯ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.

(ವಿದ್ಯಾಭ್ಯಾಸ/ ಶಿಕ್ಷಣಕ್ಕಾಗಿ/ ಇತರೆ ಸರ್ಕಾರಿ ಸೌಲಭ್ಯಕ್ಕಾಗಿ ಅಥವಾ ಸಾಲಕ್ಕಾಗಿ ಪಡೆದಿರುವ ಜಾತಿ ಪ್ರಮಾಣ ಪತ್ರ ಗಳನ್ನು ಪರಿಗಣಿಸಲಾಗುವುದಿಲ್ಲ) ಮೀಸಲಿರಿಸಿದ ವರ್ಗಗಳಲ್ಲಿ ಗ್ರಾಮೀಣ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ಹುದ್ದೆಗಳನ್ನು ಅದೇ ವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.-

### ಎ) ಗ್ರಾಮೀಣ ಅಭ್ಯರ್ಥಿ.

ಗ್ರಾಮೀಣ ಮೀಸಲಾತಿಯಡಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ, 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದಲ್ಲಿ ಮಾತ್ರ ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ-2 ನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ತಹಶೀಲ್ದಾರರವರಿಂದ ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.

ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಪ್ರವರ್ಗ-1, 2 ಎ, ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ-2 ರಲ್ಲಿ ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಹಾಗೂ ಜಾರಿ ದಿನಾಂಕದೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು. ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರುವ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಅಭ್ಯರ್ಥಿಗಳ ನೇರ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅಂತಹವರು ಗ್ರಾಮೀಣ ಮೀಸಲಾತಿಗೆ ಸಹ ಅನರ್ಹರಾಗುತ್ತಾರೆ. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ನೇಮಕಾತಿ ಪ್ರಕಟಣೆಯ ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿದೆ).

### ಬಿ) ಅನುಚ್ಛೇಧ 371 (ಜೆ) ರಂತೆ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ.

ಕರ್ನಾಟಕ ಸಾರ್ವಜನಿಕ ಉದ್ಯೋಗ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ) ಮೀಸಲಾತಿ ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳ ಅನುಬಂಧ-ಎ ಯಲ್ಲಿರುವ ನಮೂನೆಯಲ್ಲೆಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಆಯುಕ್ತರಿಂದ ಪಡೆದಿಟ್ಟುಕೊಳ್ಳತಕ್ಕದ್ದು, ಮೂಲ ದಾಖಲಾತಿಗಳ ಪರಿಶೀಲನಾ ಸಮಯಯಲ್ಲಿ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದು ಈ ಅಧಿಸೂಚನೆಯ ಕೊನೆಯಲ್ಲಿ ಅನುಬಂಧದಲ್ಲಿ ತೋರಿಸಲಾಗಿದೆ. ಈ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ

ಪಡೆಯಲಾದ ಅರ್ಹತಾ ಪ್ರಮಾಣ ಪತ್ರ ತಿರಸ್ಕರಿಸಲಾಗುವುದು ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳ ರಾಜ್ಯ ವೃಂದಕ್ಕೆ ಸೇರಿದ ಹುದ್ದೆಗಳಿಗೂ ಅರ್ಹತೆ ಇದ್ದಲ್ಲಿ ಪರಿಗಣಿಸಲಾಗುವುದು.

## VII) ಶೈಕ್ಷಣಿಕ ವಿದ್ಯಾರ್ಹತೆ:

ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಆಯಾ ಹುದ್ದೆಗಳಿಗೆ ಅನುಸೂಚಿಯಲ್ಲಿ ಹುದ್ದೆಯ ಮುಂದೆ ಸೂಚಿಸಿರುವ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಹುದ್ದೆಗಳಿಗೆ ಅಗತ್ಯವಿರುವ ಕನಿಷ್ಠ ವಿದ್ಯಾರ್ಹತೆಯಲ್ಲಿ ಎಲ್ಲಾ ಸೆಮಿಸ್ಟರ್/ವರ್ಷಗಳಲ್ಲಿ ಎಲ್ಲಾ ವಿಷಯಗಳು ಮತ್ತು ಭಾಷೆಗಳು ( **All subjects including languages**) ನಿಗಧಿಪಡಿಸಿರುವ ಗರಿಷ್ಟ ಅಂಕಗಳು ಮತ್ತು ಪಡೆದಿರುವ ಅಂಕಗಳನ್ನು ಪರಿಗಣಿಸಿ ಶೇಕಡಾವಾರು ಸರಾಸರಿ ಅಂಕಗಳನ್ನು ಸ್ಪಷ್ಟವಾಗಿ ನಮೂದಿಸುವುದು.

ಗ್ರೇಡ್ ಅಂಕಗಳನ್ನು ಪಡೆದ ಅಭ್ಯರ್ಥಿಗಳು ಅವರ ಗ್ರೇಡ್ ಅಂಕಗಳನ್ನು ಶೇಕಡವಾರು ಅಂಕಗಳಿಗೆ ಪರಿವರ್ತಿಸಿ ವಿಶ್ವವಿದ್ಯಾಲಯ ನೀಡಿರುವ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಶೇಕಡಾವಾರು ಅಂಕಗಳನ್ನು ತಪ್ಪದೇ ನಮೂದಿಸಬೇಕು. ಪದವಿ ಎಂದರೆ ಅಭ್ಯರ್ಥಿಯು 10 +2 ರ ವಿದ್ಯಾಭ್ಯಾಸದ ನಂತರ ಭಾರತದಲ್ಲಿಯ ಯಾವುದೇ ಅಂಗೀಕೃತ ವಿಶ್ವ ವಿದ್ಯಾನಿಲಯದಿಂದ ಪಡೆದ ಕನಿಷ್ಟ ಮೂರು ವರ್ಷಗಳ ಅವಧಿಯ ಸಾಂಪ್ರದಾಯಿಕ ಪದವಿ (10+2+3).

## VIII) ಸಾಮಾನ್ಯ ನಿಬಂಧನೆಗಳು:

ಅರ್ಜಿಗಳನ್ನು ಭರ್ತಿ ಮಾಡಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ನೇಮಕಾತಿ ಪ್ರಕಟಣೆಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಹೊಂದಿರಲೇಬೇಕು.

ಪರೀಕ್ಷಾರ್ಥ ಅವಧಿ 2 ವರ್ಷ ಇರುತ್ತದೆ. ಅವಶ್ಯವಿದ್ದಲ್ಲಿ ಪರೀಕ್ಷಾರ್ಥ ಅವಧಿಯನ್ನು ವಿಸ್ತರಿಸಲಾಗುವುದು. ಪರೀಕ್ಷಾರ್ಥ ಅವಧಿಯಲ್ಲಿ ಅಭ್ಯರ್ಥಿಗಳ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಅಂತಹವರ ಸೇವೆಯನ್ನು ಖಾಯಂಗೊಳಿಸಲಾಗುವುದು.

ಅರ್ಜಿಯಲ್ಲಿ ನಮೂದಿಸಿದ ಅಂಕಪಟ್ಟಿ/ಇತರೆ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಯಾವುದೇ ಹಂತದಲ್ಲಿ ಹಿಂದಕ್ಕೆ ಪಡೆಯುವ/ರದ್ದುಪಡಿಸುವ ಅಧಿಕಾರವನ್ನು ಬ್ಯಾಂಕು ಕಾಯ್ದಿರಿಸಿಕೊಂಡಿರುತ್ತದೆ.

ಅಭ್ಯರ್ಥಿಗಳು **on line** ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು.

ಹಂತ–1: ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ಜಾಲತಾಣ**http://recruit-app.com/kscard2020** ಮೂಲಕ ಆನ್ ಲೈನ್ ಅರ್ಜಿಯನ್ನು ಭರ್ತಿ ಮಾಡುವ ಪೂರ್ವದಲ್ಲಿ ಅಧಿಸೂಚನೆ ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಅರ್ಥೈಸಿಕೊಳ್ಳತಕ್ಕದ್ದು ಮತ್ತು ಅಂತಿಮವಾಗಿ ನಿಯಮ ಮತ್ತು ಷರತ್ತುಗಳನ್ನು ಕೆಳಗಿನ ಚೆಕ್ ಬಾಕ್ಸ್ ಅನ್ನು ಒತ್ತುವ ಮೂಲಕ ಒಪ್ಪಿಕೊಳ್ಳತಕ್ಕದ್ದು ಮತ್ತು Open Application ಗುಂಡಿಯನ್ನು ಒತ್ತಿ ಮುಂದುವರಿಯಿರಿ.

<u>ಹಂತ–2:</u> ಸಂಬಂಧಪಟ್ಟ ಹುದ್ದೆಯನ್ನು ಆಯ್ಕೆ ಮಾಡಿ **Apply** ಗುಂಡಿಯನ್ನು ಒತ್ತಿ ಅರ್ಜಿಯನ್ನು ಭರ್ತಿಮಾಡತಕ್ಕದ್ದು. ಅರ್ಜಿಯನ್ನು ಭರ್ತಿಮಾಡಿದ ನಂತರ ನಮೂದಿಸಿದ ವಿವರಗಳನ್ನು ಮತ್ತೊಮ್ಮೆ ಕೂಲಂಕುಷವಾಗಿ ಪರಿಶೀಲಿಸಿಕೊಂಡು, ಎಲ್ಲಾ ವಿವರಗಳು ಸರಿಯಾಗಿರುತ್ತವೆಯೆಂದು ಖಚಿತಪಡಿಸಿಕೊಂಡ ನಂತರ Preview ಗುಂಡಿಯನ್ನು ಒತ್ತಿ ಮುಂದುವರೆಯುವುದು.

<u>ಹಂತ–3:</u> ಅರ್ಜಿಯಲ್ಲಿನ ಯಾವುದೇ ವಿವರಗಳಲ್ಲಿ ಬದಲಾವಣೆ ಅಗತ್ಯವಿದ್ದಲ್ಲಿ ಪೂರ್ವದರ್ಶನ (Preview) ಪುಟದಲ್ಲಿ ಗುಂಡಿಯನ್ನು ಒತ್ತಿ ನಿಮ್ಮ ಅರ್ಜಿಯಲ್ಲಿನ ವಿವರಗಳು ಸರಿ ಇರುವುದನ್ನು ಖಚಿತಪಡಿಸಿಕೊಂಡು, ನಿಮ್ಮ ಸಹಿಯೊಂದಿಗಿನ ಪಾಸ್ ಪೋರ್ಟ್ ಗಾತ್ರದ ಸ್ಕ್ಯಾನ್ ಮಾಡಿದ ಭಾವಚಿತ್ರವನ್ನು ಅಪ್ ಲೋಡ್ ಮಾಡುವ ಬಗ್ಗೆ Next ಗುಂಡಿಯನ್ನು ಒತ್ತಿ.

<u>Note</u>: ಈ ಹಂತದಲ್ಲಿ ಅಭ್ಯರ್ಥಿಯು ಪರದೆಯ ಮೇಲೆ ಮೂಡಲಾದ Registration Id ಯನ್ನು ತಪ್ಪದೇ ಬರೆದಿಟ್ಟುಕೊಳ್ಳಬೇಕು. ಅಭ್ಯರ್ಥಿಯು ನೊಂದಾಯಿಸಿದ ಇಮೇಲ್ ವಿಳಾಸಕ್ಕೆ ಒಂದು ಸ್ವಯಂಚಾಲಿತ ಇಮೇಲ್ ಮೂಲಕ ಅವರ Registration Id ಮತ್ತು Password ಅನ್ನು ಕಳುಹಿಸಲಾಗುವುದು. ಅಭ್ಯರ್ಥಿಯು Edit Application ಗುಂಡಿಯನ್ನು ಒತ್ತಿ, ಅವರ Registration Id ಮತ್ತು Next Password ಅನ್ನು ಬಳಸಿ ತಮ್ಮ ವಿವರಗಳನ್ನು ಅಪ್ ಲೋಡ್ ಮಾಡಬಹುದು ಅಥವಾ ಅಪ್ ಲೋಡ್ ಮಾಡಿದ ಮಾಹಿತಿಯನ್ನು ಬದಲಾಯಿಸಬಹುದು.

ಹಂತ: 4: ನೀವು ಸ್ವಸಹಿಯೊಂದಿಗಿನ ಸ್ಕ್ಯಾನ್ ಮಾಡಿದ ಪಾಸ್ ಪೋರ್ಟ್ ಗಾತ್ರದ ಭಾವಚಿತ್ರವನ್ನು ಆಯ್ಕೆ ಮಾಡುವ ಬಗ್ಗೆ Browse ಗುಂಡಿಯನ್ನು ಒತ್ತಿ ಮತ್ತು ನಿಮ್ಮ ಸಹಿಯೊಂದಿಗಿನ ಭಾವಚಿತ್ರವನ್ನು ಪೂರ್ವದರ್ಶನ (Preview) ಮಾಡಲು Submit ಗುಂಡಿಯನ್ನು ಒತ್ತಿ ಒಂದು ವೇಳೆ ತಪ್ಪಾದ ಭಾವಚಿತ್ರವನ್ನು ಅಪ್ ಲೋಡ್ ಮಾಡಿದಲ್ಲಿ ಮೇಲಿನ ಕ್ರಮವನ್ನು ಪುನರಾವರ್ತಿಸಿ ಮುಂದಿನ ಪುಟದ ಬಗ್ಗೆ next ಗುಂಡಿಯನ್ನು ಒತ್ತಿದರೆ ಅರ್ಜಿಯಲ್ಲಿನ ಯಾವುದೇ ವಿವರವನ್ನು ಬದಲಾಯಿಸಲು ಸಾಧ್ಯವಿರುವುದಿಲ್ಲ.

ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಭ್ಯರ್ಥಿಯು ತನ್ನ ಇತ್ತೀಚಿನ ಭಾವಚಿತ್ರವನ್ನು ಖಾಲಿ ಬಿಳಿ ಕಾಗದದ ಮೇಲೆ ಇರಿಸಿ, ಕಪ್ಪು, ಮಾರ್ಕರ್ ಪೆನ್ನಿನಿಂದ ಭಾವಚಿತ್ರದ ಕೆಳಗೆ ಸಹಿ ಮಾಡಿರುವುದನ್ನು ಮತ್ತು ಅಂಕಣದೊಳಗೆ ಇರುವುದನ್ನು ಖಚಿತ ಪಡಿಸಿಕೊಳ್ಳುವುದು. ಯಾವುದೇ ಕಾರಣಕ್ಕೂ ಭಾವ ಚಿತ್ರದ ಮೇಲೆ ಸಹಿ ಮಾಡಬಾರದು.

| |
|---|
| **ಕಡತ ಗಾತ್ರ < 100 ಕೆ.ಬಿ.** |
| **ಡಿಪಿಐ ಸೆಟ್ಟಿಂಗ್ = 100 ಡಿಪಿಐ** |
| **ಆಕೃತಿ ಪ್ರಮಾಣ = 100%** |
| **ಬಣ್ಣ** |
| **ಜೆಪಿಜಿ/ಜೆಪಿಇಜಿ** |
| |

| |
|---|
| **ಪಾಸ್‌ಪೋರ್ಟ್ ಭಾವಚಿತ್ರ ಮತ್ತು ಸಹಿ** |
| **35 mm** <br> **ಭಾವಚಿತ್ರ** |
| **ಸಹಿ: 20 mm** |

**Note:** ಅಭ್ಯರ್ಥಿಯು **photo upload** ಗುಂಡಿಯನ್ನು ಒತ್ತಿ, ಅವರ **Registration Id** ಮತ್ತು **password** ಅನ್ನು ಬಳಸಿ ತಮ್ಮ ಸಹಿಯೊಂದಿಗಿನ ಭಾವಚಿತ್ರವನ್ನು ಅಪ್ ಲೋಡ್ ಮಾಡಬಹುದು ಅಥವಾ

ತಪ್ಪಾದಲ್ಲಿ ಅದನ್ನು ಬದಲಾಯಿಸಬಹುದು. ಒಂದು ವೇಳೆ ಅಭ್ಯರ್ಥಿಯು ತಮ್ಮ ಭಾವಚಿತ್ರ ಮತ್ತು ಸಹಿಯನ್ನು ಅಪ್ ಲೋಡ್ ಮಾಡದಿದ್ದರೆ ಅವರ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

ಹಂತ: 5: ಅಭ್ಯರ್ಥಿಗಳು ಸಂಬಂಧಪಟ್ಟ ವಿದ್ಯಾರ್ಹತೆ, ಸೇವಾನುಭವ, ಮೀಸಲಾತಿ(ಜಾತಿ ಪ್ರಮಾಣ ಪತ್ರ, ಗ್ರಾಮೀಣ ಪ್ರಮಾಣ ಪತ್ರ) ವಯೋಮಿತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಗಳಿಗೆ ಗೆಜೆಟೆಡ್ ಸರ್ಕಾರಿ ಅಧಿಕಾರಿಯಿಂದ ದೃಢೀಕರಿಸಿ ಸಂಬಂಧಪಟ್ಟ ಎಲ್ಲಾ ಪ್ರಮಾಣ ಪತ್ರಗಳನ್ನು ಸ್ಕ್ಯಾನ್ ಮಾಡಿ **upload** ಮಾಡತಕ್ಕದ್ದು. ಅಪೂರ್ಣವಾಗಿರುವ, ಫೋಟೋ ಮತ್ತು ಅಭ್ಯರ್ಥಿಯು ಸಹಿ ಮಾಡದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಹಂತ: 6: ಅರ್ಜಿಯ ಮುದ್ರಣವನ್ನು ಪಡೆಯಲು **Print Application** ಗುಂಡಿಯನ್ನು ಒತ್ತಿ ಅನಂತರವೇ **Application Preview** ಮೂಡಲಿದ್ದು, ಅಭ್ಯರ್ಥಿಗಳು ಅರ್ಜಿಯ ಪ್ರತಿಯನ್ನು ಕಡ್ಡಾಯವಾಗಿ **download** ಮಾಡಿಕೊಳ್ಳತಕ್ಕದ್ದು. ಬ್ಯಾಂಕು ಅಪೇಕ್ಷಿಸಿದಾಗ ಈ ಪ್ರತಿಯನ್ನು ಹಾಜರುಪಡಿಸಬೇಕು.

ಹಂತ: 7: ನಂತರ ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ **Post office challan** ಗುಂಡಿಯನ್ನು ಒತ್ತಿ **challan** ಪ್ರತಿಯನ್ನು **download** ಮಾಡಿಕೊಂಡು ಕರ್ನಾಟಕ ರಾಜ್ಯದಲ್ಲಿನ ಯಾವುದೇ ಇ-ಪಾವತಿ ಅಂಚೆ ಕಛೇರಿಗೆ ಹೋಗಿ, ನಿಗದಿತ ಅರ್ಜಿ ಶುಲ್ಕ + ಸೇವಾ ಶುಲ್ಕ (ರೂ 30/-) ಯನ್ನು ಪಾವತಿ ಮಾಡಿ ಅಂತಿಮವಾಗಿ ಪೋಸ್ಟ್ ಆಫೀಸ್ ಸ್ಟಿಕ್ಕರ್ ಅನ್ನು ನಿಮ್ಮ **challan** ಪ್ರತಿಯ ಮೇಲೆ ಅಂಟಿಸುವುದರಿಂದ ನಿಮ್ಮ ಶುಲ್ಕ ಪಾವತಿಯನ್ನು ದೃಢಪಡಿಸಲಾಗುತ್ತದೆ.

.**Note:** ಶುಲ್ಕವನ್ನು ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ 03-7-2020 ರ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಡಿ.ಡಿ, ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**IX)** ಅಭ್ಯರ್ಥಿಗಳು **Online** ಮೂಲಕ ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳ ಪ್ರತಿಯನ್ನು ಸರ್ಕಾರಿ ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಅಪ್‌ಲೋಡ್ ಮಾಡತಕ್ಕದ್ದು, ಆದರೆ ಈ ಕೆಳಕಂಡ ಪ್ರಮಾಣ ಪತ್ರಗಳನ್ನು/ದಾಖಲಾತಿಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಅಂದರೆ, ದಿನಾಂಕ 01-7-2020 ರೊಳಗೆ ಪಡೆದಿರಬೇಕು. ಇಲ್ಲವೇ ಸಿಂಧುವಾಗಿರಬೇಕು ಹಾಗೂ ಬ್ಯಾಂಕು ಪರಿಶೀಲನೆಗಾಗಿ ಹಾಜರುಪಡಿಸಲು ಸೂಚಿಸಿದಾಗ ಅರ್ಜಿಯಲ್ಲಿ ನಮೂದಿಸಿರುವ ಮೀಸಲಾತಿಯ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುವುದು.

1. ಕಡ್ಡಾಯವಾಗಿ ಹಾಜರುಪಡಿಸಬೇಕಾದ ವಿದ್ಯಾರ್ಹತೆ/ ಜನ್ಮ ದಿನಾಂಕ ಹಾಗೂ ಅಗತ್ಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸದಿದ್ದಲ್ಲಿ ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.
2. ವಿವಿಧ ಮೀಸಲಾತಿ ಕೋರಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳನ್ನು ಹಾಜರುಪಡಿಸದಿದ್ದಲ್ಲಿ ಆ ಮೀಸಲಾತಿಯನ್ನು ರದ್ದುಪಡಿಸಿ ಸಾಮಾನ್ಯ ಅರ್ಹತೆಯ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು.

**X)** ಮೌಖಿಕ ಸಂದರ್ಶನದ ವೇಳೆ/ಬ್ಯಾಂಕು ಯಾವುದೇ ಸಂದರ್ಭದಲ್ಲಿ ಪರಿಶೀಲನೆಗೆ ಸೂಚಿಸಿದಾಗ ಕಡ್ಡಾಯವಾಗಿ ಹಾಜರುಪಡಿಸಬೇಕಾದ ಮೂಲ ಪ್ರಮಾಣ ಪತ್ರಗಳು.

1. ವಿವಿಧ ಹುದ್ದೆಗಳಿಗೆ ನಿಗಧಿಪಡಿಲಾದ ವಿದ್ಯಾರ್ಹತೆಯ ಎಲ್ಲಾ ಸೆಮಿಸ್ಟರ್‌ಗಳ/ವರ್ಷಗಳ ಪ್ರಮಾಣ ಪತ್ರಗಳು ಅಥವಾ ಅಂಕಪಟ್ಟಿಗಳು.
2. ಜನ್ಮ ದಿನಾಂಕವನ್ನು ನಮೂಧಿಸಿರುವ ಎಸ್ ಎಸ್ ಎಲ್ ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ **Extract of Cumulative Record** /ಜನನ ಪ್ರಮಾಣ ಪತ್ರ.
3. ಮೀಸಲಾತಿಗಳನ್ನು ಕೋರಿದ್ದಲ್ಲಿ, ಮೀಸಲಾತಿ ಪ್ರಮಾಣ ಪತ್ರಗಳು
4. ಕಂಪ್ಯೂಟರ್ ನಿರ್ವಹಣೆಯಲ್ಲಿ ಸಂಬಂಧಪಟ್ಟ ಹುದ್ದೆಗಳಿಗೆ ನಿಗದಿಪಡಿಸಿರುವಂತೆ ಜ್ಞಾನ ಹೊಂದಿರುವ ಪ್ರಮಾಣ ಪತ್ರಗಳು.

5. ಅಭ್ಯರ್ಥಿಗಳು ಸಹಕಾರ ವಿಷಯದಲ್ಲಿ ಪದವಿ/ಸ್ನಾತಕೊತ್ತರ ಪದವಿ ಹೊಂದಿದ್ದಲ್ಲಿ ಸಂಬಂಧಿಸಿದ ಪ್ರಮಾಣ ಪತ್ರಗಳು/ಅಂಕಪಟ್ಟಿಗಳು

6. ಇಬ್ಬರು ಸ್ಥಳೀಯ ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ

## XI) ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಕೋರಿದ್ದಲ್ಲಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳು

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ –2ಎ ಮೀಸಲಾತಿ ಅಭ್ಯರ್ಥಿಗಳು ನಮೂನೆ ಡಿ/ಇ/ಎಫ್ ನಲ್ಲಿ ತಹಶೀಲ್ದಾರ್ ರವರಿಂದ ಪಡೆದಿರುವ ಪ್ರಮಾಣ ಪತ್ರ.
2. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2 ರಲ್ಲಿ

## XII) ಪ್ರಮುಖ ಸೂಚನೆಗಳು:

1. ಅಭ್ಯರ್ಥಿಗಳು **Online** ಅರ್ಜಿಗಳಲ್ಲಿ ನೀಡುವ ಮಾಹಿತಿಗಳ ಆಧಾರದ ಮೇಲೆ ಅವರುಗಳು ಲಿಖಿತ ಪರೀಕ್ಷೆಗೆ ಅರ್ಹರೆ ಎಂಬುದನ್ನು ಬ್ಯಾಂಕು ಪರಿಶೀಲಿಸಿ ಮೇಲು ನೋಟಕ್ಕೆ ಆರ್ಹರೆಂದು ಕಂಡುಬಂದ ಅಭ್ಯರ್ಥಿಗಳಿಗೆ ಮಾತ್ರ ಲಿಖಿತ ಪರೀಕ್ಷೆಗೆ ಕರೆ ಪತ್ರಗಳನ್ನು ಜಾಲತಾಣದಲ್ಲಿ ನೀಡಲಾಗುತ್ತದೆ. ಆದ್ದರಿಂದ ನಿಗಧಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಅನುಭವ, ಮೀಸಲಾತಿ ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.
2. ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸುವ ಮೀಸಲಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ, ಅನುಭವ ಹಾಗೂ ವಯೋಮಿತಿ ಸಡಿಲಿಕೆ ಇತ್ಯಾದಿ ವಿವರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು. ಹಾಗೂ ಈ ಬಗ್ಗೆ ಅನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆ ಪತ್ರಗಳನ್ನು ಪುರಸ್ಕರಿಸಲಾಗುವುದಿಲ್ಲ.
3. ಅಭ್ಯರ್ಥಿಗಳು ವಿದ್ಯಾರ್ಹತೆ, ಅನುಭವ, ಮೀಸಲಾತಿ, ವಯೋಮಿತಿ ಮುಂತಾದ ಅವಶ್ಯಕ ದಾಖಲೆಗಳನ್ನು ಸರ್ಕಾರಿ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಪ್ರತಿಗಳನ್ನು ಆನ್–ಲೈನ್ ನಲ್ಲಿ ಅಪ್ ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ಅಪೂರ್ಣವಾಗಿರುವ ಫೋಟೊ ಮತ್ತು ಅಭ್ಯರ್ಥಿಯು ಸಹಿ ಮಾಡದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
4. ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೊ ಪ್ರತಿಯನ್ನು ಕಡ್ಡಾಯವಾಗಿ ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.
5. ಲಿಖಿತ ಪರೀಕ್ಷೆಗೆ ಅನರ್ಹರಾಗಿರುವ ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿಗಳನ್ನು ವೈಯಕ್ತಿಕವಾಗಿ ನೀಡಲಾಗುವುದಿಲ್ಲ.

## XIII) ಲಿಖಿತ ಪರೀಕ್ಷೆಗೆ ಪತ್ರ:

ಬ್ಯಾಂಕು ಲಿಖಿತ ಪರೀಕ್ಷೆಗೆ ಆರ್ಹವಿರುವ ಅಭ್ಯರ್ಥಿಗಳ ಪಟ್ಟಿಯನ್ನು ಹಾಗೂ ಲಿಖಿತ ಪರೀಕ್ಷೆಯ ದಿನಾಂಕವನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗುವುದು ಮತ್ತು ಆರ್ಹ ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ಕರೆ ಪತ್ರಗಳನ್ನು ಬ್ಯಾಂಕಿನ ಜಾಲತಾಣದಿಂದ (**http://recruit-app.com/kscard2020**) ಡೌನ್ ಲೋಡ್ ಮಾಡಿಕೊಂಡು, ಆ ಪರೀಕ್ಷಾ ಪತ್ರ (**Hall Ticket**) ವನ್ನು ಪಡೆದುಕೊಂಡು ಲಿಖಿತ ಪರೀಕ್ಷೆಗೆ ಬರುವಾಗ ಹಾಜರುಪಡಿಸತಕ್ಕದ್ದು.

ಅಭ್ಯರ್ಥಿತ್ವದ ವಿಚಾರದಲ್ಲಿ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ **Help Line No. 8861410093**ನ್ನು ಸಂಪರ್ಕಿಸಬಹುದು.

## XIV) ದುರ್ನಡತೆ:

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸುತ್ತಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಆಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ/ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು. ಮುಂದೆ ಬ್ಯಾಂಕು ನೇಮಕಾತಿ ಮಾಡುವ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಅನರ್ಹ ಮಾಡಲಾಗುವುದು.

## XV) ನೇಮಕಾತಿಗೆ ಅನರ್ಹತೆಗಳು:

1. ಯಾವುದೇ ನಿಷೇಧಿತ ಸಂಘ ಸಂಸ್ಥೆಯ ಸದಸ್ಯನಾಗಿರುವಲ್ಲಿ ಅಥವಾ ಸದಸ್ಯನಾಗಿದ್ದಲ್ಲಿ ಅಥವಾ ಯಾವುದೇ ನಿಷೇಧಿತ ಸಂಸ್ಥೆಯ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲಿ.
2. ಭಾರತ ಸಂವಿಧಾನಕ್ಕೆ ಚ್ಯುತಿ ತರುವ ಕಾರ್ಯದಲ್ಲಿ ಪ್ರವೃತ್ತನಾದಲ್ಲಿ
3. ಕಾನೂನು ಭಂಗ ಮಾಡಿ ಹಿಂಸಾಕೃತ್ಯದಲ್ಲಿ ತೊಡಗಿಕೊಂಡಿದ್ದಲ್ಲಿ
4. ಭಾರತ ದೇಶದ ಸಾರ್ವಭೌಮ ಹಾಗೂ ಸುಭದ್ರತೆಗೆ ಧಕ್ಕೆ ತರುವ ಕಾರ್ಯದಲ್ಲಿ ತೊಡಗಿಕೊಂಡಿದ್ದಲ್ಲಿ
5. ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ಉಚ್ಚಾಟನೆಗೊಂಡಿದ್ದಲ್ಲಿ
6. ವ್ಯಕ್ತಿಯು ನ್ಯಾಯಬಾಹಿರ ಕೃತ್ಯಗಳಲ್ಲಿ ತೊಡಗಿ ಅಪರಾಧಕ್ಕೆ ಒಳಗಾದ ಪ್ರಸಂಗಗಳಲ್ಲಿ,
7. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿಯಿರುವ ವ್ಯಕ್ತಿಯನ್ನು ವಿವಾಹವಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಿರುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು

(ಪ.ಜಾ/ಪ.ಪಂ ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ–ಡಿ

(ನಿಯಮ 3ಎ (2) (3) ನೋಡಿ)

ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ/ಪ.ಪಂ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ

ಪ್ರಮಾಣ ಪತ್ರ

– – – – ––ರಾಜ್ಯದ/ಕೇಂದ್ರಾಡಳಿತ ಪ್ರದೇಶದ– – – – – – – – – – – ಜಿಲ್ಲೆಯ/ವಿಭಾಗದ – – – –– –– – – – – – – – – – ಗ್ರಾಮ/ಪಟ್ಟಣದ ನಿವಾಸಿಯಾದ ಶ್ರೀ/ಶ್ರೀಮತಿ– – – – – – – – – – – – ಎಂಬುವವರ ಮಗ/ಮಗಳಾದ ಶ್ರೀ/ಶ್ರೀಮತಿ– – – – – – – – – – – – – – – – ಇವರು ಅನುಸೂಚಿತ ಜಾತಿ/ ಅನುಸೂಚಿತ ಬುಡಕಟ್ಟು ಎಂದು ಮಾನ್ಯ ಮಾಡಲಾಗಿರುವ ಜಾತಿ/ಬುಡಕಟ್ಟಿಗೆ ಸೇರಿರುತ್ತಾರೆಂದು ಪ್ರಮಾಣಿಕರಿಸಿದೆ.

- ಸಂವಿಧಾನ(ಅನುಸೂಚಿತ ಜಾತಿಗಳು) ಆದೇಶ, 1950
- ಸಂವಿಧಾನ(ಅನುಸೂಚಿತ ಬುಡಕಟ್ಟುಗಳು) ಆದೇಶ, 1950
- ಸಂವಿಧಾನ(ಅನುಸೂಚಿತ ಜಾತಿ)(ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
- ಸಂವಿಧಾನ(ಅನುಸೂಚಿತ ಬುಡಕಟ್ಟುಗಳು) ಆದೇಶ, 1950
- ಸಂವಿಧಾನ(ಅನುಸೂಚಿತ ಜಾತಿಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951
  ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1958, ಮುಂಬಯಿ ತಾಜ್ಯ ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1986, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ.1970 ಮತ್ತು ಈಶಾನ್ಯ ಪ್ರದೇಶಗಳ(ಪುನರ್ ರಚನಾ ಅಧಿನಿಯಮ, 1971 ರ ಮೂಲ ತಿದ್ದುಪಡಿಯಾದಂತೆ)
- ಸಂವಿಧಾನ
- ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1978 ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ)ಅನುಸೂಚಿತ ಬುಡಕಟ್ಟುಗಳ ಪ್ರದೇಶ 1959
- ಸಂವಿಧಾನ (ದಾದರ್ ಮತ್ತು ನಾಗರ್‌ಹವೇಲಿ) ಅನುಸೂಚಿತ ಜಾತಿಗಳ ಆದೇಶ, 1962
- ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1984
- ಸಂವಿಧಾನ ಅನುಸೂಚಿತ ಜಾತಿಗಳು ಉತ್ತರ ಪ್ರದೇಶ ಆದೇಶ, 1967
- ಸಂವಿಧಾನ (ಗೋವಾ, ದಮನ್ ಮತ್ತು ಡಿಯು ) ಅನುಸೂಚಿತ ಜಾತಿ/ ಆದೇಶ, 1988
- ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ,

ಶ್ರೀ/ಶ್ರೀಮತಿ/ಕುಮಾರಿ– – – –– – – – – –– – –– – – – – – ಮತ್ತು /ಅಥವಾ/ಅವನ/ಅವಳ ಕುಟುಂಬವು – – – – – – – – – – – – – – – – – – – – – ರಾಜ್ಯ/ಕೇಂದ್ರಾಡಳಿತ ಪ್ರದೇಶದ – – – – – – – – – – ಜಿಲ್ಲಾ/ವಿಭಾಗದ — – – – – – – – – – – – – – – ಗ್ರಾಮ/ಪಟ್ಟಣದ ಸಾಮಾನ್ಯ ನಿವಾಸಿ(ಗಳು)

ಸಹಿ

ತಹಶೀಲ್ದಾರ್– – – – – – – –

ಸ್ಥಳ: ಪದನಾಮ

ದಿನಾಂಕ: ಕಛೇರಿಯ ಮೊಹರಿನೊಂದಿಗೆ

**ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ**

**ನಮೂನೆ–ಇ**

**(ನಿಯಮ 3ಎ (2) (3) ನೋಡಿ)**

**ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ**

**–––– – – –– – – – – –– – –– – ಗ್ರಾಮ/ಪಟ್ಟಣದ/ನಗರ ನಿವಾಸಿಯಾದ ಶ್ರೀ/ಶ್ರೀಮತಿ – – – – – – – – – – – – – – – – – – – – – – – –ಇವರ ಮಗ/ಮಗಳು/ಪತಿ/ಪತ್ನಿಯಾದ ಶ್ರೀ/ಶ್ರೀಮತಿ/ – – – – – – – – – – – – – – – ಇವರು ಹಿಂದುಳಿದ ವರ್ಗಗಳ (ಪ್ರವರ್ಗ) – – – – – – – – – ಜಾತಿಯ — – – – – – – – ಉಪಜಾತಿಗೆ ಸೇರಿರುತ್ತಾರೆಂದು ಪ್ರಮಾಣಿಕರಿಸಲಾಗಿದೆ.**

**ಸ್ಥಳ**

**ದಿನಾಂಕ:** **ತಹಶೀಲ್ದಾರ್**

**ಕಛೇರಿಯ ಮೊಹರು** **ತಾಲ್ಲೂಕು**

**ಪ್ರವರ್ಗ–2ಎ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ**

**ನಮೂನೆ–ಎಫ್**

(ನಿಯಮ 3ಎ (2) (3) ನೋಡಿ)

ಹಿಂದುಳಿದ ವರ್ಗಗಳಿಗೆ (ಪ್ರವರ್ಗ–2ಎ, 2ಬಿ, 3ಎ, 3ಬಿ ಗೆ ಕ್ಕೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಆದಾಯ ಪ್ರಮಾಣ ಪತ್ರ

– – – – – – – – – – – – ರಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ/ – – – – – – – – – – – – –ಇವರ ಮಗ/ಮಗಳು/ಪತ್ನಿ /ಪತಿ/ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ– – – – – – – – – – ಇವರು ಮತ್ತು ಆತನ/ಅವರ/ತಂದೆ/ತಾಯಿ/ಪೋಷಕರು/ಪತ್ನಿ/ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ.ಎಸ್.ಡಬ್ಲ್ಯೂಡಿ225 ಬಿಸಿಎ 2000 30–03–2002 ರಲ್ಲಿ ನಿರ್ದಿಷ್ಟಪಡಿಸಿದ ಮೇಲುಸ್ತರದ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು.

ಅಭ್ಯರ್ಥಿಯಾಗಲಿ ಅಥವಾ ಆತನ/ಆಕೆಯ ತಂದೆ ತಾಯಿ/ಪೋಷಕರಾಗಲಿ/ಪತ್ನಿ/ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು.

ಅಥವಾ

ಸಾರ್ವಜನಿಕರ ವಲಯ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ.

ಅಥವಾ

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ.5000– 12000/– ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು.

ಅಥವಾ

ಆತನ/ಆಕೆಯ/ತಂದೆ ತಾಯಿ/ಪೋಷಕರು/ಪತ್ನಿ/ಪತಿಯ ಆದಾಯವು ಎರಡು ಲಕ್ಷ ಮೀರುವುದಿಲ್ಲವೆಂದು.

ಅಥವಾ

ಕರ್ನಾಟಕ ಭೂ ಸುಧಾರಣ ಅಧಿನಿಯಮ 1961 ರಲ್ಲಿ ನಿಗದಿಪಡಿಸಿರುವಂತೆ ಆತನ/ಆಕೆಯ ತಂದೆ ತಾಯಿ/ಪೋಷಕರು/ಪತ್ನಿ/ ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ/ಆಕೆಯ ತಂದೆ ತಾಯಿ/ಪೋಷಕ/ಪತ್ನಿ/ ಪತಿಯು ಅಥವಾ ಇವರಿಬ್ಬರೂ 10 ಯುನಿಟ್ ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ.ಎಸ್.ಡಬ್ಲ್ಯೂಡಿ225 ಬಿಸಿಎ 2000 ದಿನಾಂಕ 30–03–2002 ರ ಅನ್ವಯ ಶ್ರೀ/ಶ್ರೀಮತಿ/ಕುಮಾರಿ– – – – – – – – – ಇವರು – – – – – – ಜಾತಿಗೆ – – – – ಸೇರಿದ ಉಪ ಜಾತಿಯವರಾಗಿದ್ದು ಸರ್ಕಾರಿ ಆದೇಶ ಸಂಖ್ಯೆ. ಎಸ್.ಡಬ್ಲ್ಯೂಡಿ225 ಬಿಸಿಎ

2000ದಿನಾಂಕ 30-03-2002 ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ- - - - - - - - -( 2ಎ, 2ಬಿ, 3ಎ, 3ಬಿ)ಕ್ಕೆ ಸೇರಿರುತ್ತಾರೆ.

ಸ್ಥಳ
ದಿನಾಂಕ:

ತಹಶೀಲ್ದಾರ್

ತಾಲ್ಲೂಕು
ಕಛೇರಿಯ ಮೊಹರು

**ಸೂಚನೆ:**

1) ಸರ್ಕಾರದ ಆದೇಶ ಸಂಖ್ಯೆ:ಹಿಂವಕ 148 ಜಿಸಿಎ 2015, ದಿನಾಂಕ 04-06-2015 ರಂತೆ ಹಿಂದುಳಿದ ವರ್ಗಗಳ ಪ್ರವರ್ಗ-2ಎ, 2ಬಿ, ಮತ್ತು 3ಬಿ ಮೀಸಲಾತಿಗಳಿಗೆ ಅನ್ವಯಿಸುವಂತೆ --------- ನಿಗದಿಪಡಿಸಿರುವ ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ, ಪೋಷಕರ ವಾರ್ಷಿಕ ಒಟ್ಟು ಆದಾಯ ಮಿತಿಯನ್ನು (Gross Annual Income) 4.50 ಲಕ್ಷಗಳಿಂದ 6.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಆದುದರಿಂದ, ಮೀಸಲಾತಿ ಪ್ರಮಾಣ ಪತ್ರವನ್ನು ನೀಡುವ ಅಧಿಕೃತ ಅಧಿಕಾರಿಯು ದಿನಾಂಕ 04-06-2015 ರ ಸರ್ಕಾರಿ ಆದೇಶದಲ್ಲಿನ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ನೀಡತಕ್ಕದ್ದು.
2) ಈ ಮೇಲೆ ಹೇಳಲಾದ ಸರ್ಕಾರಿ ಆದೇಶದಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ಸದರಿ ಮೀಸಲಾತಿಗಳನ್ನು ಕ್ಲೈಂ ಮಾಡುವ ಅಭ್ಯರ್ಥಿಗಳು ಅದರಂತೆ/ ಜಾತಿ/ಮೀಸಲಾತಿ ಪ್ರಮಾಣ ಪತ್ರಗಳನ್ನು ಮಾಡಿಸಲು ಸೂಚಿಸಿದೆ.

**ನಮೂನೆ–1**

**ಜನರಲ್ ಮೆರಿಟ್ ಅಭ್ಯರ್ಥಿಗಳು ಮೇಲುಸ್ತರಕ್ಕೆ ಸೇರಿಲ್ಲವೆಂದು, ಧೃಢೀಕರಿಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣ ಪತ್ರ**

**(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿ ಮಾಡಬೇಕಾದ ನಮೂನೆ)**

ಇವರಿಗೆ:

ತಹಶೀಲ್ದಾರರು

–––––––ತಾಲ್ಲೂಕು

––––– – – ಜಿಲ್ಲೆ

ಶ್ರೀ/ಶ್ರೀಮತಿ/– – – –– – – – – –– – –– – – – – ಎಂಬುವವರ ಮಗ/ಮಗಳು/ಪತಿ/ಪತ್ನಿ – – – – – – – – – – – – – – – – – – – –– – – –ಆದ ನಾನು ಮೇಲುಸ್ತರದಲ್ಲಿ ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

1 ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ

2 ಅಭ್ಯರ್ಥಿಯ ಸ್ವಂತ ಸ್ಥಳ ಗ್ರಾಮ

ತಾಲ್ಲೂಕು:

ಜಿಲ್ಲೆ:

3 ಅಭ್ಯರ್ಥಿಯು ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ

4 ಅಭ್ಯರ್ಥಿಯ ತಂದೆ/ತಾಯಿ/ಪೋಷಕರ ಪತಿಯ/ಪತ್ನಿಯ ಹೆಸರು ಮತ್ತು ಉದ್ಯೋಗ (ಉದ್ಯೋಗವು ಸರ್ಕಾರಿ/ಅರೆ ಸರ್ಕಾರಿ/ಸಾರ್ವಜನಿಕ ಉದ್ಯಮ/ಖಾಸಗಿ

5 ಅಭ್ಯರ್ಥಿಯ ಪ್ರಸ್ತುತ ವಿಳಾಸ (ಸ್ಪಷ್ಟವಾಗಿ ನಮೂದಿಸುವುದು)

6 ಅಭ್ಯರ್ಥಿಯ ಶಾಲಾ ಶಿಕ್ಷಣದ ವ್ಯಾಸಾಂಗ ಮಾಡಿದ ಶಾಲೆಗಳ ವಿವರಗಳು

ಪ್ರಾಥಮಿಕ

ಮಾಧ್ಯಮಿಕ

ಪ್ರೌಢ

7 ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ/ತಾಯಿ/ಪೋಷಕರ/(ತಂದೆ/ತಾಯಿ ಜೀವಂತವಿಲ್ಲದಿದ್ದರೆ)

ಇವರ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ:

1) ವೇತನ ಶ್ರೇಣಿ

2) ಜಮೀನಿನ ವಿವರ

3) ಇತರ ಮೂಲಗಳು

8 ಆದಾಯ ತೆರಿಗೆ ಪಾವತಿದಾರರೇ?

9 ಸಂಪತ್ತು ತೆರಿಗೆ ಪಾವತಿದಾರರೇ

10 ಮಾರಾಟ ತೆರಿಗೆ ಪಾವತಿದಾರರೇ?

## ಪ್ರಮಾಣೀಕೃತ ಘೋಷಣೆ

ಈ ಮೇಲೆ ನನ್ನಿಂದ ಒದಗಿಸಿದ ಮಾಹಿತಿ/ವಿವರಣೆಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು. ಘೋಷಿಸುತ್ತೇನೆ.

ಸ್ಥಳ

ದಿನಾಂಕ:

ತಮ್ಮ ವಿಧೇಯ

(ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣಿಕರಿಸುತ್ತಾ, ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ಸ್ಥಳ

ದಿನಾಂಕ:

ತಂದೆ/ತಾಯಿ/ಪೋಷಕರ ಸಹಿ

ತಂದೆ/ತಾಯಿ/ ಜೀವಂತವಿಲ್ಲದಿದ್ದರೆ

(ಹೆಂಡತಿ/ಗಂಡ/ಇವರ ಸಹಿ)

## ಸ್ಥಳೀಯ ಇಬ್ಬರು ಸಾಕ್ಷಿದಾರರು

ಅಭ್ಯರ್ಥಿಯ ಮತ್ತು ಅವರ ತಂದೆ/ತಾಯಿ/ಪೋಷಕರು/ಪತಿ/ಪತ್ನಿ ಇವರನ್ನು ಹಾಗೂ ಇವರ ಸಹಿಯನ್ನು ಗುರುತಿಸುತ್ತೇವೆ.

ಸಾಕ್ಷಿದಾರರ ಸಹಿ

(ಪೂರ್ಣ ವಿಳಾಸದೊಂದಿಗೆ)

1)

2)

## ಪರಿಶೀಲನಾ ಪ್ರಮಾಣ ಪತ್ರ

1. ಶ್ರೀ/ಶ್ರೀಮತಿ/– – – – –– – – – – –– – –– – – – – – ಎಂಬುವವರ ಮಗ/ಮಗಳು/ಪತಿ/ಪತ್ನಿ ಶ್ರೀ/ಶ್ರೀಮತಿ/ಕುಮಾರಿ – – – – – – – – – – – – – – – – – – ಎಂಬುವವರು ಕರ್ನಾಟಕ ರಾಜ್ಯದ – – – – – – – – – ಜಿಲ್ಲೆಯ ವಿಭಾಗ – – – – – – – – – – – – – ಗ್ರಾಮ/ಪಟ್ಟಣ/ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆ ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.

2. ಶ್ರೀ/ಶ್ರೀಮತಿ/ಕುಮಾರಿ – – – – –– – – – – –– – –– – – – – – ಇವರ ತಂದೆ/ತಾಯಿ/ಪೋಷಕರು/ ಸರ್ಕಾರಿ ಆದೇಶ ಸಂಖ್ಯೆ.ಎಸ್.ಡಬ್ಲ್ಯೂ.ಡಿ 251 /ಬಿ.ಸಿ.ಎ/94, ಬೆಂಗಳೂರು, ದಿನಾಂಕ 31–01–1995 ರನ್ವಯ ಜನರಲ್ ಮೆರಿಟ್ ವರ್ಗದ ಮೇಲುಸ್ತರದಲ್ಲಿ (**creamy layer**) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ: ತಹಶೀಲ್ದಾರ್

ದಿನಾಂಕ

– – – – – ––ತಾಲ್ಲೂಕು

ಕಛೇರಿಯ ಮೊಹರು

ಸೂಚನೆ: 1) ಇದರಲ್ಲಿ ಉಪಯೋಗಿಸಲಾದ ' ಸಾಮಾನ್ಯ ನಿವಾಸಿ ' ಎಂಬ ಪದವು 1950 ರಿಂದ ಜನತಾ ಪ್ರಾತಿನಿಧ್ಯ ಕಾಯ್ದೆಯ 20ನೇ ಅನುಚ್ಛೇದದಲ್ಲಿನ ಅರ್ಥವನ್ನು ಹೊಂದಿರುತ್ತದೆ.

ಸೂಚನೆ: 2) ಪರಿಶೀಲನಾ ಪ್ರಮಾಣ ಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ. ಎಸ್.ಡಬ್ಲ್ಯೂ.ಡಿ 251 /ಬಿ.ಸಿ.ಎ/94, ಬೆಂಗಳೂರು, ದಿನಾಂಕ 31–01–1995 ರನ್ವಯ ಮೇಲುಸ್ತರದಲ್ಲಿ (**creamy layer**) ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪ್ರಮಾಣ ಪತ್ರ ನೀಡತಕ್ಕದ್ದು.

**ನಮೂನೆ–2**

**ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ**

ಶ್ರೀ/ಶ್ರೀಮತಿ– – – –– – – – – –– – – –– – ರವರ ಮಗ/ಮಗಳು/ಪತಿ/ಪತ್ನಿ /ಶ್ರೀಮತಿ/ಕುಮಾರಿ – – – – – – – – – – – – – – – – ಇಲ್ಲಿ – – – – – – – – – – ತಾಲ್ಲೂಕು — – – – – – – – ಗ್ರಾಮದಲ್ಲಿ – – – – –– – – – – – – – – – ವಾಸವಾಗಿರುವ ಇವರು ಒಂದನೇ ತರಗತಿಯಿಂದ – – – – – – – – – – – – – –– ತರಗತಿವರೆಗೆ – – – – – – – – – – – – ಇಲ್ಲಿ – – – – – – – ತಾಲ್ಲೂಕು– – – – – – – – – – – – – – ಪಟ್ಟಣ – – – – – – – – – – – – – – – – ಶಾಲೆಯಲ್ಲಿ ವ್ಯಾಸಂಗ ಮಾಡಿ – – – – – – – – – ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1979 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1984 ರ ಅಡಿಯಲ್ಲಿ ನಿರ್ದಿಷ್ಟಪಡಿಸಿ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು.

| | |
|---|---|
| ಮೇಲು ರುಜು | ಸಹಿ |
| ಕ್ಷೇತ್ರ ಶಿಕ್ಷಣ ಅಧಿಕಾರಿ<br>ಕಛೇರಿಯ ಮೊಹರು | ಮುಖ್ಯೋಪಾಧ್ಯಾಯರ ಸಹಿ ಮತ್ತು<br>ಸಂಸ್ಥೆಯ ಮೊಹರು |

ಸ್ಥಳ
ದಿನಾಂಕ

ಪ್ರಸ್ತುತವಾಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ನೇಮಕಾತಿ ಪ್ರಾಧಿಕಾರಿಗಳಿಂದ ಪಡೆಯಬೇಕಾದ ನಿರಾಕ್ಷೇಪಣಾ/ಅನುಮತಿ ಪತ್ರದ ನಮೂನೆ

ಸಂಖ್ಯೆ: ದಿನಾಂಕ:

ನಿರಾಕ್ಷೇಪಣಾ/ಅನುಮತಿ ಪತ್ರದ ನಮೂನೆ

ಶ್ರೀ/ಶ್ರೀಮತಿ – – – – – – – – – – – – – – – – ತಂದೆ– – – – – – – – – – – – ಇವರು — – – – –– – – – – – – ದಿನಾಂಕ– – – – – – – – – –ರಿಂದ– – – – – – – – – ಸಂಸ್ಥೆಯಲ್ಲಿ– – – – – – – – – – – – ಹುದ್ದೆಯಲ್ಲಿ ಖಾಯಂ/ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರು ಸಂಖ್ಯೆ:ಮಾಸಂಅ/ಹೈ.ಕ.ನೇ./ /2020–21 ದಿನಾಂಕ: –06–2020 ಅಧಿಸೂಚನೆಯಂತೆ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ ಇವರು ಆಹ್ವಾನಿಸಿರುವ– – – – – – – – – – – – – – – ಹುದ್ದೆಗೆ ಅರ್ಜಿ ಸಲ್ಲಿಸಲು ಈ ಸಂಸ್ಥೆ/ಇಲಾಖೆಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ.

ಪ್ರಸ್ತುತ ನೇಮಕಾತಿ ಪ್ರಾಧಿಕಾರಿಗಳ ಪದನಾಮ
ಮೊಹರು

# <u>ನಡತೆ ಪ್ರಮಾಣ ಪತ್ರ</u>

ಶ್ರೀ– – – –– – – – – –– – –– – – – – – – – – – ಇವರ ಮಗನಾದ/ಮಗಳಾದ/ಶ್ರೀ/ಶ್ರೀಮತಿ – – – – – – – – – – – – – – – – – – – – – ಇವರನ್ನು ನಾನು ಕಳೆದ – – – – – – – – – – ವರ್ಷ — – – – – – – – – – – – – – – – ತಿಂಗಳುಗಳಿಂದ ಬಲ್ಲೆ ಮತ್ತು ನನಗೆ ತಿಳಿದ ಮಟ್ಟಿಗೆ ಹಾಗೂ ನಂಬುವಷ್ಟರ ಮಟ್ಟಿಗೆ ಒಳ್ಳೆಯ ನಡತೆಯುಳ್ಳವರಾಗಿದ್ದಾರೆ ಮತ್ತು ಸರ್ಕಾರಿ ಉದ್ಯೋಗಕ್ಕೆ ಸೇರಲು ಅನರ್ಹಗೊಳಿಸುವಂಥ ಯಾವ ಪೂರ್ವೋತ್ತರಗಳನ್ನು ಅವರು ಹೊಂದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಶ್ರೀ/ಶ್ರೀಮತಿ– – – – – – – – – – – – – – –– – – – – – – – – – ಇವರು ನನಗೆ ಸಂಬಂಧಿಕರಲ್ಲ.

ಸ್ಥಳ: ರುಜು:

ದಿನಾಂಕ: ಉದ್ಯೋಗನಾಮ:

**ನಮೂನೆ–9**

**ಅನುಬಂಧ–ಎ**

**ಅರ್ಹತಾ ಪ್ರಮಾಣ ಪತ್ರ**

**(ಅನುಚ್ಛೇದ 371(ಜೆ) ಮೇರೆಗೆ)**

**(3(3)ನೇ ನಿಯಮ ನೋಡಿ**

**(ಪ್ರಮಾಣ ಪತ್ರ ನೀಡಲು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013)**

**ಶ್ರೀ/ಶ್ರೀಮತಿ–––––––––––––––––––––––––––––ರವರು ––––––––––––––––––– ರವರ ಮಗ/ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ ––––––––––––––ಜಿಲ್ಲೆ––––––––– –––ತಾಲೂಕಿನ –––––––––––––––––––––––––ಗ್ರಾಮ/ಪಟ್ಟಣದ ಸ್ಥಳೀಯ ವ್ಯಕ್ತಿಯಾಗಿದ್ದಾರೆ.**

**ಸ್ಥಳ:**

**ದಿನಾಂಕ:**

**ಹೆಸರು––––––––––––––––––––––**

**ಅಸಿಸ್ಟೆಂಟ್ ಕಮೀಷನರ್**

**–––––––––––––––––––ಉಪ ವಿಭಾಗ**

**–––––––––––––––––––––ಜಿಲ್ಲೆ**